# ನಿಮ್ಮೊಡನೆ

## ಬಯಲು ಶೌಚಾಲಯದ ಕಳಂಕ

'ವಿಶ್ವ ಆರೋಗ್ಯ ಸಂಸ್ಥೆ'ಯ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿನ ಶೌಚಾಲಯ ವ್ಯವಸ್ಥೆಗಿಂತಲೂ ಮೊಬೈಲ್ ಸಂಪರ್ಕ ಜಾಲವೇ ಹೆಚ್ಚು ಬಲವಾಗಿದೆ. ಭಾರತದ ಶೇಕಡಾ 53ಕ್ಕಿಂತಲೂ ಹೆಚ್ಚು ಜನರು ಮೊಬೈಲ್ ಫೋನ್‌ಗಳನ್ನು ಹೊಂದಿದ್ದಾರೆ. ಆದರೆ, ಶೇಕಡಾ 46 ಮಂದಿಗಷ್ಟೇ ಶೌಚಾಲಯ ವ್ಯವಸ್ಥೆ ಇರುವುದು.

ಬಯಲು ಬಹಿರ್ದೆಸೆ ನಿಷೇಧ ಕುರಿತಂತೆ ರಾಮನಗರ ಜಿಲ್ಲಾ ಪಂಚಾಯತಿ ಚಿಂತನೆ ನಡೆಸಿರುವುದು ಬದಲಾವಣೆಯ ಹಂಬಲ ಮತ್ತು ಆಡಳಿತ ವ್ಯವಸ್ಥೆಯ ವೈಫಲ್ಯಗಳನ್ನು ಒಟ್ಟಿಗೆ ಸಂಕೇತಿಸುವಂತಿದೆ. ಬಯಲು ಶೌಚಾಲಯಗಳನ್ನು ನಿರ್ಮೂಲಗೊಳಿಸುವುದು ಇಂದಿನ ಅಗತ್ಯ ಇರುವಂತೆಯೇ, ಆ ಪರಿಸ್ಥಿತಿ ಜೀವಂತ ಆಗಿರುವಲ್ಲಿ ವ್ಯವಸ್ಥೆಯ ಪಾತ್ರವೇನು ಎನ್ನುವುದರ ವಿಶ್ಲೇಷಣೆಯೂ ಆಗಬೇಕಾಗಿದೆ.

ಭಾರತವೂ ಸೇರಿದಂತೆ ಅಭಿವೃದ್ಧಿಶೀಲ ಹಾಗೂ ಬಡದೇಶಗಳ ಪ್ರಮುಖ ಸಮಸ್ಯೆಗಳಲ್ಲಿ ಬಯಲು ಶೌಚಾಲಯವೂ ಸೇರಿದೆ. ವಿಪರ್ಯಾಸವೆಂದರೆ ಶೌಚಾಲಯದ ಸವಲತ್ತು ವಂಚಿತರಲ್ಲಿ ಬಹುತೇಕರು ಭಾರತೀಯರೇ ಆಗಿರುವುದು. ನೆರೆಯ ದೇಶಗಳಾದ ಪಾಕಿಸ್ತಾನ, ಶ್ರೀಲಂಕಾ, ನೇಪಾಳ, ಬಾಂಗ್ಲಾ, ಆಫ್ಘಾನಿಸ್ತಾನಗಳಿಗಿಂತಲೂ ಶೌಚಾಲಯದ ವ್ಯವಸ್ಥೆಯಲ್ಲಿ ಭಾರತ ಹಿಂದುಳಿದಿದೆ. ದೇಶದಲ್ಲಿ ನೂರಕ್ಕೆ 73 ಗ್ರಾಮೀಣರು ದೇಹಬಾಧೆ ತೀರಿಸಿಕೊಳ್ಳಲು ಬಯಲನ್ನೇ ಆಶ್ರಯಿಸಿದ್ದಾರೆ. ಸ್ವಾತಂತ್ರ್ಯ ಚಳವಳಿಯ ಒಂದು ಭಾಗವಾಗಿ ಮಹಾತ್ಮ ಗಾಂಧೀಜಿ ಗ್ರಾಮ ನೈರ್ಮಲ್ಯವನ್ನು ಪ್ರತಿಪಾದಿಸಿದರು. ಸ್ವತಃ ಮಲ ಬಳಿದ ಗಾಂಧೀಜಿ, ನಿರ್ಮಲ ಭಾರತದ ಕನಸು ಕಂಡರು. ಬಾಪು ಹೆಸರಿನ ಯೋಜನೆಗಳು ಹಾಗೂ 'ನಿರ್ಮಲ ಭಾರತ ಅಭಿಯಾನ' ಸೇರಿದಂತೆ ಏನೆಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಗಣನೀಯ ಪ್ರಮಾಣದ ನೈರ್ಮಲ್ಯ ಈವರೆಗೆ ಸಾಧ್ಯವಾಗದೆ ಇರುವುದು ದೇಶಕ್ಕೆ ಅಂಟಿದ ಕಪ್ಪುಕಲೆಯಂತೆ ಕಾಣಿಸುತ್ತದೆ.

'ವಿಶ್ವ ಆರೋಗ್ಯ ಸಂಸ್ಥೆ'ಯ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿನ ಶೌಚಾಲಯ ವ್ಯವಸ್ಥೆಗಿಂತಲೂ ಮೊಬೈಲ್ ಸಂಪರ್ಕ ಜಾಲವೇ ಹೆಚ್ಚು ಬಲವಾಗಿದೆ. ಭಾರತದ ಶೇಕಡಾ 53ಕ್ಕಿಂತಲೂ ಹೆಚ್ಚು ಜನರು ಮೊಬೈಲ್ ಫೋನ್‌ಗಳನ್ನು ಹೊಂದಿದ್ದಾರೆ. ಆದರೆ, ಶೇಕಡಾ 46 ಮಂದಿಗಷ್ಟೇ ಶೌಚಾಲಯ ವ್ಯವಸ್ಥೆ ಇರುವುದು. ಆಧುನಿಕತೆ ಮತ್ತು ನಾಗರಿಕತೆಗಳ ಈ ವೈರುಧ್ಯ ಇತರೆಡೆಗಳಲ್ಲೂ ಇದೆ. ಜಾಗತಿಕ ಜನಸಂಖ್ಯೆಯಲ್ಲಿ ಮೊಬೈಲ್ ಫೋನ್‌ಗಳನ್ನು ಹೊಂದಿರುವವರ ಸಂಖ್ಯೆ 600 ಕೋಟಿಗೂ ಹೆಚ್ಚಾಗಿದ್ದರೆ, ನಾಲ್ಕುನೂರ ಐವತ್ತು ಕೋಟಿ ಮಂದಿಯಷ್ಟೇ ಶೌಚಾಲಯದ ಸವಲತ್ತು ಹೊಂದಿದ್ದಾರೆ. ಈ ವೈರುಧ್ಯದ ಬಗ್ಗೆ ವಿಶ್ವಸಂಸ್ಥೆ ಆತಂಕ ವ್ಯಕ್ತಪಡಿಸಿದೆ. 2025ರ ವೇಳೆಗೆ ಬಯಲು ಶೌಚಾಲಯ ಪದ್ಧತಿಯನ್ನು ನಿರ್ಮೂಲನೆಗೊಳಿಸುವ ಗುರಿ ಅದರ ಮುಂದಿದೆ.


ಬಯಲು ಶೌಚಾಲಯ ಎನ್ನುವುದು ಗ್ರಾಮೀಣ ಪ್ರದೇಶಗಳ ಸಮಸ್ಯೆಯಾಗಿಷ್ಟೇ ಪ್ರಸ್ತುತ ಉಳಿದಿಲ್ಲ. ನಗರಗಳಲ್ಲಿನ ಕೊಳೆಗೇರಿಗಳಲ್ಲಿ ಕೂಡ ಈ ಸಮಸ್ಯೆ ದೊಡ್ಡ ಪ್ರಮಾಣದಲ್ಲಿದೆ. ಮಹಾನಗರಗಳಲ್ಲಿನ ರೈಲ್ವೆ ಹಳಿಗಳುದ್ದಕ್ಕೂ ಬೆಳಗು ಬೈಗಿನಲ್ಲಿ ಶೌಚಕ್ಕೆ ಕೂತವರ ಸಾಲುಗಳನ್ನು ನೋಡಬಹುದು.

'ನಿರ್ಮಲ ಭಾರತ ಅಭಿಯಾನ' ಸೇರಿದಂತೆ ಬಡವರು ಶೌಚಾಲಯ ನಿರ್ಮಿಸಿಕೊಳ್ಳಲು ಹಲವು ಯೋಜನೆಗಳು ಚಾಲ್ತಿಯಲ್ಲಿದ್ದರೂ, ಶೌಚಾಲಯಗಳ ನಿರ್ಮಾಣಕ್ಕೆ ಸಹಾಯ ಧನ ನೀಡುತ್ತಿದ್ದರೂ ಸಾಧಿಸಿರುವ ಪ್ರಗತಿ ಆಶಾದಾಯಕವಾಗಿಲ್ಲ. ಅನುದಾನಗಳ ಸಮರ್ಪಕ ವಿನಿಯೋಗವೂ ಸಾಧ್ಯವಾಗುತ್ತಿಲ್ಲ. ನೀರಿನ ಸಮಸ್ಯೆ ಕೂಡ ಶೌಚಾಲಯಗಳ ಕೊರತೆಗೆ ಕಾರಣವಾಗಿದೆ. ನೂರಕ್ಕೆ 46 ಶೌಚಾಲಯಗಳಲ್ಲಷ್ಟೇ ಅವುಗಳ ನಿರ್ವಹಣೆಗೆ ಅಗತ್ಯವಿರುವಷ್ಟು ನೀರು ದೊರೆಯುತ್ತಿದೆ. ಶೇ.3.6 ಶೌಚಾಲಯಗಳಲ್ಲಿ ಮಾತ್ರ ನಲ್ಲಿನೀರಿನ ಸವಲತ್ತಿದೆ. ಈ ನಿರಾಶಾದಾಯಕ ಅಂಕಿಅಂಶಗಳ ನಡುವೆಯೂ ಸಿಕ್ಕಿಂ ಮತ್ತು ಕೇರಳ ರಾಜ್ಯಗಳು ಬಯಲು ಶೌಚಾಲಯ ಮುಕ್ತ ರಾಜ್ಯಗಳೆಂದು ಈಗಾಗಲೇ ಪ್ರಕಟಿಸಿಕೊಂಡಿವೆ. ಉತ್ತರಪ್ರದೇಶ, ಮಣಿಪುರ, ಮಧ್ಯಪ್ರದೇಶ, ಜಾರ್ಖಂಡ್, ಮೇಘಾಲಯ, ಬಿಹಾರ, ಅಸ್ಸಾಂ ರಾಜ್ಯಗಳು ಈ ನಿಟ್ಟಿನಲ್ಲಿ ಸಾಗಬೇಕಾದ ದಾರಿ ದೂರವಿದೆ.

ಕರ್ನಾಟಕದಲ್ಲಿ ಶೇ. 5ರಷ್ಟು ಗ್ರಾಮ ಪಂಚಾಯತಿಗಳು ಶೌಚಾಲಯ ವ್ಯವಸ್ಥೆ ಕಲ್ಪಿಸುವಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿವೆ. ವಿಶೇಷವಾಗಿ ಕರಾವಳಿಯ ಜಿಲ್ಲೆಗಳು ಬಯಲು ಶೌಚಾಲಯ ಪರಿಕಲ್ಪನೆಯಿಂದ ಸಾಕಷ್ಟು ದೂರ ಉಳಿದಿರುವುದು ಗಮನಾರ್ಹ. ಈ ಬೆಳವಣಿಗೆ ಸಾಕ್ಷರತೆ ಮತ್ತು ನೈರ್ಮಲ್ಯಕ್ಕೆ ಇರುವ ಸಂಬಂಧದ ಸೂಚನೆಯೂ ಇರಬಹುದು. 2015ರ ವೇಳೆಗೆ ಬಯಲು ಶೌಚಾಲಯ ಮುಕ್ತ ರಾಜ್ಯವಾಗಿ ಕರ್ನಾಟಕ ರೂಪುಗೊಳ್ಳುವ ನಿರೀಕ್ಷೆಯಿದೆ.

ಮನೆಯಲ್ಲಿ ಶೌಚಾಲಯ ಇಲ್ಲದಿರುವುದರಿಂದ ಹೆಣ್ಣುಮಕ್ಕಳು ಅನುಭವಿಸುವ ಮುಜುಗರ, ಸಂಕಟ ಅಷ್ಟಿಷ್ಟಲ್ಲ. ಮುಂಜಾನೆ 4ರ ಒಳಗೆ ಅಥವಾ ರಾತ್ರಿ 8ರ ನಂತರ ಬಯಲಿಗೆ ಹೋಗುವುದನ್ನು ರೂಢಿಸಿಕೊಂಡ ಹೆಣ್ಣುಮಕ್ಕಳು ಸಾಕಷ್ಟು ಮಂದಿಯಿದ್ದಾರೆ. ಈ ಹಿನ್ನೆಲೆಯಲ್ಲಿ, 'ಶೌಚಾಲಯ ಇಲ್ಲದ ಮನೆಯ ಗಂಡನ್ನು ಮದುವೆ ಆಗಲು ಯುವತಿಯರು ನಿರಾಕರಿಸಬೇಕು' ಎನ್ನುವ ಕರೆ ರಾಮನಗರ ಜಿಲ್ಲೆಯಲ್ಲಿ ಕೇಳಿಸುತ್ತಿರುವುದು ಸರಿಯಾಗಿಯೇ ಇದೆ. ಶೌಚಾಲಯದ ಸವಲತ್ತು ಹೆಣ್ಣುಮಕ್ಕಳ ವಿಶೇಷ ಹಕ್ಕು ಆಗಿರುವಂತೆಯೇ ಅದು ಅವರ ಘನತೆಯ ರೂಪಕವೂ ಆಗಿದೆ.

■ ರಘುನಾಥ ಚ.ಹ.



ಈಶ್ವರ್